**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ:390/2021**

**ಸಾಕ್ಷಿಯನ್ನು ದಿಃ 02.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಶಿಲ್ಪಾ | ಸಿಡಬ್ಲ್ಯೂ:1 | ಪಿಡಬ್ಲ್ಯೂ:2 |
| ಗಂಡನ ಹೆಸರು | ಶ್ರೀನಿವಾಸ | | |
| ವಯಸ್ಸು | 30 ವರ್ಷ | | |
| ಉದ್ಯೋಗ | ಬ್ಯಾಂಕ್ ನೌಕರರು | | |
| ವಾಸಸ್ಥಳ | ಮೈಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಆರೋಪಿ ಶರತ್ ಗೊತ್ತು. ಚಾಸಾ 2 ರವರು ನನ್ನ ಅಜ್ಜಿ. ಚಾಸಾ 3 ಆರೋಪಿಯ ಅಕ್ಕ. ಚಾಸಾ 4 ಮಹದೇವ ಎಂಬುವವರು ನನಗೆ ಗೊತ್ತಿಲ್ಲ. ಆರೋಪಿ ಶರತ್ ರವರು ತನ್ನನ್ನು ಇಷ್ಟ ಪಡುವಂತೆ ನನ್ನನ್ನು ಕೇಳಿಕೊಳ್ಳುತ್ತಿದ್ದರು. ಆದರೆ ನಾನು ಅವರಿಗೆ ಇಷ್ಟ ಪಡಲಿಲ್ಲ. ಅದಕ್ಕಾಗಿ ನಾನು ವಿರೋಧಿಸಿ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ನಲ್ಲಿ ಇರುವ ಸಹಿ ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಯನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೆ. ಸದರಿ ಮಾಡುವ ಕಾಲಕ್ಕೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸಹಿ ಮಾಡಿದಾಗ ಸಮಯ 10.30 ರಿಂದ

11.30 ಆಗಿತ್ತು. ಸಿ.ಆರ್.ಪಿ.ಸಿ ಕಲಂ 164 ಅಡಿ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ. 4 ಎಂದು, 4 ಪುಟಗಳಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ. 4(ಎ) ಯಿಂದ (ಡಿ)ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲು ಸಸಅ ರವರಿಂದಃ–</u>**

ನಾನು ಮತ್ತು ಆರೋಪಿ ಶರತ್ ಇಬ್ಬರೂ ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದೇವು ಎಂದರೆ ಸರಿಯಲ್ಲ. ಆತ ನನ್ನಿಂದ ದೂರ ಆಗಲು 2 ಲಕ್ಷ ರೂ. ಹಣ ಕೇಳುತ್ತಿದ್ದ ಎಂದರೆ ಸರಿಯಲ್ಲ. ಹಾಗೆ ಹಣವನ್ನು ಕೊಡಲಿಲ್ಲವೆಂದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ. ನಿನ್ನನ್ನು ಬದುಕಲು ಬಿಡುವುದಿಲ್ಲ, ನೀನು ಚೆನ್ನಾಗಿ ಇರಬಾರದು, ನೀನು ಯಾರನ್ನು ಮದುವೆ ಕೂಡ ಆಗುದಕ್ಕೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ. ತನ್ನ ಹತ್ತಿರು ಇರುವಂತಹ ಪೋಟೊ ತೆಗೆದು ಫೇಸ್ ಬುಕ್ ನಲ್ಲಿ ಅಪ್ಲೋಡ್ ಮಾಡುತ್ತೇನೆ ಎಂದು ಬೆದರಿಸುತ್ತಿದ್ದ ಎಂದರೆ ಸರಿಯಲ್ಲ. ದಿಃ 15.01.2021 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಟೌನ್ ಹಾಲ್ ನಲ್ಲಿ ಇರುವ ಮುಂದಿನ ರಸ್ತೆಯಲ್ಲಿ ನನಗೆ ಅಡ್ಡ ಹಾಕಿ ಬೈದು, ಸಾಯಿ ಎಂದು ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ.

ದಿಃ 16.01.2021 ರಂದು ನಗರ ಸಭೆ ಮೈದಾನದ ಮುಂದಿನ ರಸ್ತೆಯಲ್ಲಿ ನಿಪಿ. 3 ರಂತೆ ಚಾಸಾ 2 ಮತ್ತು 4 ರವರ ಸಮಕ್ಷಮ, 10.00 ರಿಂದ 11.00 ಗಂಟೆ ವರೆಗೆ ಸ್ಥಳ ಮಹಜರ್ ಜರುಗಿಸಿದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ  ಆರೋಪಿ ಪರ ಶ್ರೀ ಎಂ.ಆರ್.ಹೆಚ್ ವಕೀಲರಿಂದಃ**

ಶ್ರೀ ಎಸ್. ಕೆ  ವಕೀಲರು ಕಾಲಾವಕಾಶ ಕೋರಿದ್ದು, ನೀಡಲು ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.